# 5

# ಕ್ರಮ

ನಮ್ಮ ವಚನವು ಪರಿಚಿತವಾದದ್ದಾಗಿದೆ: "ನನ್ನವರೆಂದು ಹೆಸರುಗೊಂಡ ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವದಾದರೆ ನಾನು ಪರಲೋಕ ದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶದಲ್ಲಿ ಆರೋಗ್ಯವನ್ನು ದಯಪಾಲಿಸುವೆನು" (2 ಪೂರ್ವಕಾಲವೃತ್ತಾಂತ 7:14; KJV). ಈ ವಾಕ್ಯಭಾಗದಲ್ಲಿ ಪ್ರಸಿದ್ಧವಾಗಿದ್ದ ಸಮಯವು ಒಂದು ಇತ್ತು. ಇದು ಅದು ಕ್ವಚಿತವಾಗಿ ಉಪಯೋಗಿ ಸಲ್ಪಡುತ್ತದೆ. ಅದು ಉಪಯೋಗಿಸಲ್ಪಡುವಾಗ, ಅದು ಸಾಮಾನ್ಯವಾಗಿ ದೇಶಭಕ್ತಿಗೆ ಸಂಬಂಧಿಸಲ್ಪಟ್ಟಿರುತ್ತದೆ. ಹಿನ್ನಲೆಯು ಪ್ರಾರ್ಥನೆಯಾಗಿದೆ. ಸೊಲೊಮೋನನಿಂದ ಕಟ್ಟಲ್ಪಟ್ಟ ದೇವಾಲಯವು ಪ್ರತಿಷ್ಠಿಸಲ್ಪಟ್ಟಿತು. ಇದು ಇಸ್ರಾಯೇಲ್ಯರಲ್ಲಿ ದೊಡ್ಡ ದಿನಗ ಳಲ್ಲಿ ಒಂದಾಗಿತ್ತು. 2 ಪೂರ್ವಕಾಲವೃತ್ತಾಂತ 6ರಲ್ಲಿ ಸೊಲೊಮೋನನು "ದೇವಾ ಲಯದ ಪ್ರಾರ್ಥನೆ" ಪ್ರಾರ್ಥಿಸಿದನು. ದೇವರು ಆ ಪ್ರಾರ್ಥನೆಯನ್ನು ಕೇಳಿದನು ಮತ್ತು ಸ್ವೀಕರಿಸಿದನು! ದೇವರ ಉತ್ತರವು ಅಧ್ಯಾಯ 7ರಲ್ಲಿ ಇರುತ್ತದೆ. ಇದು ನಮ್ಮ ವಚನದ ಹಿನ್ನೆಲೆಯಾಗಿದೆ. ಅದನ್ನು ಓದಿರಿ ... ಅದನ್ನು ತಿಳಿದುಕೊಳ್ಳಿರಿ. ನಿಜವಾಗಿಯೂ, 2 ಪೂರ್ವಕಾಲವೃತ್ತಾಂತ 7:14ವು ಒಂದು ವಚನದಲ್ಲಿ ಹೇಳಿದ ಪ್ರಾರ್ಥನೆಯಾಗಿದೆ.

ಆರಾಧನೆ ಮತ್ತು ಪ್ರಾರ್ಥನೆಯಲ್ಲಿ ಕ್ರಮಕ್ಕೆ ಬೆಲೆಯಿದೆ. ಇಂದು ಇದು ಮೂಲದಲ್ಲಿ ಮರೆಯಲ್ಪಟ್ಟಿದೆ. ಪ್ರಾರ್ಥನೆಗೆ ಕ್ರಮವಿದೆ. ದೇವಾಲಯದ ಪ್ರತಿಷ್ಠೆಗಾಗಿ ಸೊಲೊಮೋನನು ಎಲ್ಲಾ ಗೋತ್ರಗಳಿಂದ ಹಿರಿಯರನ್ನೂ ಯಾಜಕರನ್ನೂ ಕರೆದನು. ಅವಶ್ಯಕ ಸಂಗತಿಗಳು ಸರಿಯಾದ ಸ್ಥಳಗಳಲ್ಲಿದ್ದವು. ದಿನವು ಪರಿಶುದ್ಧವಾದದ್ದೆಂದು ಘೋಷಿಸಲ್ಪಟ್ಟಿತು. ಕ್ರಮಕ್ಕೆ ಅದರ ಸ್ಥಾನವಿರುತ್ತದೆ. ದೇವರು ಕ್ರಮದ ದೇವರು ಆಗಿದ್ದಾನೆ, ಇಸ್ರಾಯೇಲು ಒಂದಾಗಿತ್ತು ಮತ್ತು ಸಮಾಧಾನದಲ್ಲಿ ಇತ್ತು.

(1) "*ನನ್ನವರೆಂದು ಹೆಸರುಗೊಂಡ, ನನ್ನ ಜನರು, ...*" ಪ್ರಾರ್ಥನೆಯು ದೇವರ ಮಕ್ಕಳ ಅದ್ವಿತೀಯ ಭಾಗ್ಯವಾಗಿದೆ. ದೇವರು ಪಾಪಿಗಳಿಗೆ ಕಿವಿಗೊಡುವ ಭಿನ್ನವಾದ ಸಂಗತಿಗಳು ಇರಬಹುದು - ಆದರೆ ಇದೊಂದು ನಿಯಮವಾಗಿರುವದಿಲ್ಲ.[1] ಪ್ರಾರ್ಥನೆಯು ಆತನ ಕುಟುಂಬಕ್ಕಾಗಿರುವುದು. "ಯೇಸುವಿನ ಹೆಸರಿನಲ್ಲಿ ಪ್ರಾರ್ಥನೆ" ಎಂಬುದನ್ನು ನಾವು ಅಧ್ಯಯನ ಮಾಡುವಾಗ ಬಹಳ ಸಲ ಇದು ಕಡೆಗಣಿಸಲ್ಪಟ್ಟಿರುತ್ತದೆ. ದೇವರು ತನ್ನ ಮಕ್ಕಳ ಪ್ರಾರ್ಥನೆಗಳನ್ನು ಕೇಳುತ್ತಾನೆ ಮತ್ತು ಉತ್ತರ ಕೊಡುತ್ತಾನೆ. ನಮ್ಮ ಪಾಠ ವಚನವು ಯೆರೂಸಲೇಮಿನಲ್ಲಿ ದೇವರ ಆಲಯದ ಬಳಿಯಲ್ಲಿರುತ್ತದೆ. ಜನಾಂಗವು ಒಂದಾಗಿ ದೇವರನ್ನು ಆರಾಧಿಸಲು ಕೂಡಿ ಬಂದಿರುತ್ತದೆ. ಇದು ಪ್ರಾರ್ಥನೆಯ ಭೂಮಿಯಾಗಿದೆ.

(2) "*ತಮ್ಮನ್ನು ತಗ್ಗಿಸಿಕೊಂಡರೆ.*" ಪ್ರಾರ್ಥನೆಯ ಶಾಲೆಯಲ್ಲಿ ಪ್ರತಿಯೊಂದು ಹೆಜ್ಜೆಯು ನಿರ್ಣಾಯಕವಾದದ್ದಾಗಿದೆ. ದೀನತೆಯು ಪ್ರಾರ್ಥನೆಯ ಮೊದಲು ಬರುತ್ತದೆ. ಮಾನಸಾಂತರವು ಪ್ರಾರ್ಥನೆಯ ಮೊದಲು ಬರುತ್ತದೆ. ಗರ್ವವು ಪ್ರಾರ್ಥಿಸಲಾರದು. ನಮ್ಮ ಪಥ್ಯವು ದೇವರ ಸಜೀವ ಸಾನ್ನಿಧ್ಯದ ಮೇಲೆ ಕೇಂದ್ರೀಕರಿಸುತ್ತದೆ. ದೇವಾಲಯ ಪ್ರತಿಷ್ಠೆಯ ಸಮಯದಲ್ಲಿ ದೇವರು "ಅತೀ ಪರಿಶುದ್ಧ" ಸ್ಥಳದಲ್ಲಿ ವಾಸಿಸಲು ಬಂದನು.

ದೇವರು! ದೇವರ ಮಹಿಮೆ! ಇದು ಪ್ರಾರ್ಥನೆಯ ಮೂಲವಾಗಿದೆ. ದೇವರನ್ನು ನೋಡುವುದು ಆರಾಧನೆ ಮತ್ತು ಪ್ರಾರ್ಥನೆಯಲ್ಲಿ ಮಾತ್ರವೇ ಪರಿಣಾಮಗೊಳ್ಳುತ್ತದೆ. ಯೇಸುವಿನಲ್ಲಿದ್ದ ಅದ್ವಿತೀಯ ಮನೋಭಾವನೆಯು ದೀನತೆಯಾಗಿತ್ತು. ಗ್ರೀಕರು ದೀನತೆಯನ್ನು ದ್ವೇಷಿಸಿದರು; ಅದು ಬಲಹೀನತೆಯೆಂದು ಅವರು ಯೋಚಿಸಿದರು. ದೀನತೆಯು ಅವಲಂಭನೆಯಾಗಿದೆ. ದೀನತೆಯು ಸಹಾಯ ಹೀನತೆಯ ಅರಿಕೆಯಾಗಿದೆ. ದೀನತೆಯು ಪ್ರಾಮಾಣಿಕತೆ, ವಾಸ್ತವಿಕತೆ ಆಗಿದೆ.

(3) "*ಪ್ರಾರ್ಥಿಸು.*" ಅಗತ್ಯತೆಯುಳ್ಳ ಜನರು ಪ್ರಾರ್ಥಿಸುವರು. ಪಶ್ಚಾತ್ತಾಪ ಪಟ್ಟವರು ಪ್ರಾರ್ಥಿಸುವರು. ಪ್ರಾರ್ಥನೆಯು ಎಲ್ಲಾ ಪುನರುಜ್ಜೀವಿಸುವಿಕೆಯ ಮತ್ತು ಪುನಃ ಸ್ಥಾಪನೆಯ ಅಸ್ತಿವಾರವಾಗಿರುವುದು. ಭಕ್ತಿ ಸಂಜೀವನವು ಪ್ರಾರ್ಥನೆಯಿಂದ ಮಾತ್ರವೇ ಬರುವುದು. "ಮೊದಲು ಪ್ರಾರ್ಥಿಸು!" ಓಡಬೇಡ, ಅಡಗಿಕೊಳ್ಳಬೇಡ, ಧೂಷಿಸಬೇಡ, ಅಲ್ಲಗಳೆಯಬೇಡ, ಹೋರಾಡಬೇಡ - *ಪ್ರಾರ್ಥಿಸು!* "ವಾದ್ಯವನ್ನು ಎದುರಿಸು!" "ದೇವರ ಮುಂದೆ ಶುದ್ಧನಾಗಿ ಬಾ" ನಾವು ಬೀಳಬೇಕೆಂದು ದೇವರು ಬಯಸುವದಿಲ್ಲ; ಆದರೆ ನಾವು ಬಿದ್ದರೆ, ನಾವು ಹಿಂದಿರುಗಿ ಬರಬೇಕೆಂದು ಆತನು ಬಯಸುತ್ತಾನೆ! ಎಂಥಾ ದೇವರು!

(4) "*ನನ್ನನ್ನು ಹುಡುಕಿದರೆ.*" ಇದು ಆಕರ್ಷಕವಾದ ಹೇಳಿಕೆಯಾಗಿದೆ! ಅದರ ಮೇಲೆ ಧ್ಯಾನ ಮಾಡಿರಿ! "ನನ್ನ ನಿಯಮವನ್ನು ಹುಡುಕಿರಿ" ಎಂದು ಹೇಳಲಿಲ್ಲ; "ದೇವಾಲಯಕ್ಕೆ ಹಿಂದಿರುಗಿರಿ"; "ಕೆಲವು ವಾರ ನಂಬಿಗಸ್ತರಾಗಿರಿ" ಎಂದೂ ಹೇಳಲಿಲ್ಲ. "ನನ್ನನ್ನು ಹುಡುಕಿರಿ" ಎಂದು ಆತನು ಹೇಳಿದನು. ಅನೇಕರು ದೇವರ "ಬಹುಮಾನಗಳನ್ನು" ಬಯಸುತ್ತಾರೆ, ದೇವರ ಸಾನ್ನಿಧ್ಯವನ್ನಲ್ಲ! ದೇವರು ಬಯಸಲ್ಪಡುವದನ್ನು ಬಯಸುತ್ತಾನೆ! ನಿಜವಾದ ಪ್ರಾರ್ಥನೆಯು ದೇವರಿಗಾಗಿಯೇ ನಮ್ಮ ಹುಡುಕುವಿಕೆಯಾಗಿದೆ. ಆತನು ನಮಗೆ ಬೇಕು! ಪ್ರಾರ್ಥನೆಯಲ್ಲಿ ದೇವರ ಸನ್ನಿಧಿಯಲ್ಲಿ ಬರುವದನ್ನು ರೂಢಿಸಿಕೊಳ್ಳಿರಿ.

(5) "*ತಮ್ಮ ದುಷ್ಟ ಮಾರ್ಗಗಳಿಂದ ಹಿಂದಿರುಗಿದರೆ.*" ಪಾಪಿಗಳು ಮಾನಸಾಂತರ ಪಡತಕ್ಕದ್ದು. ಪಾಪಿಗಳು ತಮ್ಮ ಪಾಪಗಳಿಂದ ಹಿಂದಿರುಗಬೇಕು. ದೇವರು "ಅಗ್ಗದ ಕೃಪೆಯನ್ನು" ಕೊಡುವದಿಲ್ಲ, ಪಾಪ ಮಾಡಲು ಒಪ್ಪಿಗೆ ಕೊಡುವದಿಲ್ಲ. ಪಾಪವು ಪಾಪ ವಾಗಿದೆ, ತಪ್ಪಿಹೋದವರು ಶಿಕ್ಷಿಸಲ್ಪಟ್ಟಿದ್ದಾರೆ.

(6) "*ಆರೋಗ್ಯವನ್ನು ದಯಪಾಲಿಸು.*" ಪಾಪಿಗಳು ಕ್ಷಮಿಸಲ್ಪಡುವರು; ದೇಶವೂ ಗುಣಪಡಿಸಲ್ಪಡುವುದು. ನಾವು ತಪ್ಪುಮಾಡಿ, ಬಿದ್ದು ಹೋಗುವಾಗಲೂ, ದೇವರು ನಾವು ಹಿಂದಿರುಗಿ ಬರಬೇಕೆಂದು ಅಪೇಕ್ಷಿಸುತ್ತಾನೆ. ದೇವರು ನಮ್ಮನ್ನು ಕೇಳಿ ನಮ್ಮನ್ನು ಕ್ಷಮಿಸುತ್ತಾನೆ. ನಮ್ಮ ಪಥ್ಯವು ಒಂದು ದೊಡ್ಡ ಪಥ್ಯವಾಗಿರುತ್ತದೆ. ಓದುತ್ತಾ ಇರಿ. ಪಶ್ಚಾತ್ತಾಪ ಪಟ್ಟವನು ಕ್ಷಮಿಸಲ್ಪಡುವನು; ಪಶ್ಚಾತ್ತಾಪಪಡದವನು ಶಿಕ್ಷಿಸಲ್ಪಡುವನು. ದೇವರು ತನ್ನ ಎಚ್ಚರಿಕೆಯನ್ನು ಕೊಡುತ್ತಾನೆ. ದೇವರ ಹೆದರಿಸುವಿಕೆಗಳು ಆತನ ವಾಗ್ದಾನಗಳಂತೆಯೇ ವಾಸ್ತವಿಕತೆಯುಳ್ಳವುಗಳಾಗಿವೆ. ದೇವರು ತನ್ನ *ಎಲ್ಲಾ* ವಾಗ್ದಾನಗಳನ್ನು ಕೈಕೊಳ್ಳುವನು. ದೀನರು ಆಶೀರ್ವದಿಸಲ್ಪಡುವರು; ಪಾಪಿಗಳು ದಂಡಿಸಲ್ಪಡುವರು. ಇದನ್ನು ದೇವರು ಸೊಲೊಮೋನನಿಗೆ ದೇವಾಲಯದ ಬಳಿಯಲ್ಲಿ ಹೇಳಿದನು.

# ಪ್ರಾರ್ಥನೆಗೆ ಆತಂಕಗಳು

## ಯಾಕೋಬ 4:14

*"... ಹೀಗೆ ನಡೆದರೆ ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಿರುವದಿಲ್ಲ" (1 ಪೇತ್ರ 3:7).*

ಪ್ರಾರ್ಥಿಸುವವರಿಗೆ ದೊಡ್ಡ ಸಂಗತಿಗಳು ಸಂಭವಿಸುತ್ತವೆ! ವಿಶ್ವಾಸಿಗಳು ಪ್ರಾರ್ಥಿಸುವಾಗ ದೇವರು ಏನನ್ನಾದರೂ ಮಾಡುತ್ತಾನೆ! ಪ್ರಾರ್ಥಿಸುವುದು ನಮ್ಮ ಜಗತ್ತಿನೊಳಗೆ ದೇವರನ್ನು ಆಮಂತ್ರಿಸುವುದು, ಹಿಂದಕ್ಕೆ ಬರುವಂತೆ ಮಾಡುವುದು ಆಗಿರುತ್ತದೆ! "ನಾವು ಯಾಕೆ ಹೆಚ್ಚು ಪ್ರಾರ್ಥಿಸಲಿಲ್ಲ?" ಎಂದು ನಿತ್ಯತ್ವದಲ್ಲೆಲ್ಲಾ ನಮ್ಮನ್ನು ನಾವು ಪ್ರಶ್ನಿಸಿಕೊಳ್ಳುತ್ತೇವೆ. ದೇವರ ವಾಕ್ಯವು ತನ್ನ ಕಾರ್ಯವನ್ನು ಮಾಡುತ್ತದೆ; ಪ್ರಾರ್ಥನೆಯು ತನ್ನ ಕಾರ್ಯವನ್ನು ಮಾಡುತ್ತದೆ. ಪ್ರಾರ್ಥನೆಯು ನನ್ನ ಸೇವೆಯಲ್ಲಿ ಅತೀ ಬಲಹೀನ ಆಯಾಮವಾಗಿರುತ್ತದೆ. ನಾವು ಪ್ರಾರ್ಥಿಸಬೇಕು, ಇನ್ನೂ ಹೆಚ್ಚು ಉತ್ತಮವಾಗಿ ಪ್ರಾರ್ಥಿಸಬೇಕು ಎಂದು ಬಯಸುತ್ತೇವೆ, ಹೀಗಿದ್ದರೂ ನಮ್ಮ ಅತಿದೊಡ್ಡ ಸೋಲುಗಳು ನಮ್ಮ ಪ್ರಾರ್ಥನೆಗಳಲ್ಲಿರುತ್ತವೆ.

> ನಾವೆಂಥ ಸಮಾಧಾನವನ್ನು ಬಹಳಸಲ ಕಳೆದುಕೊಳ್ಳುತ್ತೇವೆ,
> ನಾವೆಂಥ ಅಗತ್ಯವಾದ ನೋವುಗಳನ್ನು ಸಹಿಸುತ್ತೇವೆ,
> ಇದೆಲ್ಲದಕ್ಕೆ ಕಾರಣ ನಾವು ತೆಗೆದುಕೊಂಡು ಹೋಗುವುದಿಲ್ಲ
> ಪ್ರತಿಯೊಂದನ್ನು ಪ್ರಾರ್ಥನೆಯಲ್ಲಿ ದೇವರ ಬಳಿಗೆ.[2]

ನಾವು ಸ್ವಲ್ಪ ಪ್ರಾರ್ಥಿಸುತ್ತೇವೆ ಇಲ್ಲವೇ ಯಾವುದನ್ನೂ ಪ್ರಾರ್ಥಿಸುವದಿಲ್ಲ. ನಾವು ಪ್ರಾರ್ಥಿಸುವಾಗ, "ವ್ಯರ್ಥ ಮಾಡಿದ ಪ್ರಾರ್ಥನೆಗಳು" ಇರುವವು. ಸೈತಾನನು ನಮಗೆ ಆಂತಕವೊಡ್ಡುತ್ತಾನೆ. ಅನೇಕ ಸಂಗತಿಗಳು ನಮ್ಮ ಪ್ರಾರ್ಥನೆಗಳಿಗೆ ಆತಂಕವನ್ನೊಡ್ಡುತ್ತವೆ. ನಾವು ಇದನ್ನು ತಿಳಿದಿರತಕ್ಕದ್ದು, ಒಪ್ಪಿಕೊಳ್ಳತಕ್ಕದ್ದು, ಮತ್ತು ಇದನ್ನು ಸರಿಪಡಿಸತಕ್ಕದ್ದು. ಪ್ರಾರ್ಥನೆಯಲ್ಲಿ ನಮ್ಮ ಬೆಳವಣಿಗೆ ಅಡ್ಡೀ ಪಡಿಸುವಂಥದ್ದು ಯಾವುದು?

### ಪ್ರಾರ್ಥನೆಯು ಆಕ್ರಮಿಸಲ್ಪಟ್ಟಿದೆ

ನಾವು ಬಹಳ "ಕಾರ್ಯನಿರತರಾಗಿರುವುದು" ನಿಜಾಂಶವಾಗಿದೆ. *ಒಳ್ಳೆಯದು ಅತ್ಯುತ್ತಮವಾದದ್ದನ್ನು* ಕಿತ್ತು ಹಾಕಿದೆ! ಬಹಳ ಕಾರ್ಯದಿಂದ ತುಂಬಿರುವ ಕಾರ್ಯಕ್ರಮಗಳ ಸೆರೆಯಾಳುಗಳು ನಾವಾಗಿದ್ದೇವೆ. ಕುಟುಂಬಕ್ಕಾಗಿ, ಸಭೆಗಾಗಿ, ಪ್ರಾರ್ಥನೆಗಾಗಿ ಇಲ್ಲವೇ ದೇವರಿಗಾಗಿ ನಮಗೆ ಸಮಯವಿರುವದಿಲ್ಲ. ನಮ್ಮ ಉದ್ದೇಶಗಳು ಒಳ್ಳೆಯವುಗಳಾಗಿವೆ. ನಾವು ಪ್ರಾರ್ಥಿಸಲು ಬಯಸುತ್ತೇವೆ, ಆದಾಗ್ಯೂ ನಮಗೆ ನೇಮಿತವಾದ ಸ್ಥಳ ಇಲ್ಲವೇ ನೇಮಿತ ಸಮಯವು ಇರುವದಿಲ್ಲ. ನಾವು ಸಂಗತಿಗಳನ್ನು ಸೈತಾನಿಗಾಗಿ ಸುಲಭ ವಾಗಿ ಮಾಡಿಕೊಡುತ್ತೇವೆ. "ಓಟದಲ್ಲಿರುವ" ಅಗಾಧವಾದ ಪ್ರಾರ್ಥನೆಯನ್ನು ನೀವೆಂದೂ ತಿಳಿದಿರುವದಿಲ್ಲ. ಇದು ಸ್ನೇಹತ್ವಕ್ಕೆ, ಕುಟುಂಬಕ್ಕೆ ಮತ್ತು ದೇವರಿಗೆ ಅವಮಾನವಾಗಿದೆ.

*ನಿನ್ನ ಕಾರ್ಯಕ್ರಮಕ್ಕೆ ಪ್ರಾಧಾನ್ಯತೆ ಕೊಡಬೇಡ; ನಿನ್ನ ಪ್ರಾಧಾನ್ಯತೆಗಳನ್ನು ಕ್ರಮಪಡಿಸಿಕೋ.*

ನಮಗೆ ಮನಸ್ಸು ಬಂದಾಗ ದೇವರೊಂದಿಗೆ ಮಾತಾಡಲು ನಾವು ಅವಕಾಶ ಹೊಂದಿದ್ದೇವೆ. ದೇವರ ದೂರವಾಣಿ ಎಂದೂ ಬಹಳವಾಗಿ ಕಾರ್ಯನಿರತವಾಗಿರುವದಿಲ್ಲ! ಎಂಥಾ ಭಯಭಕ್ತಿಯುಳ್ಳ ವಾಸ್ತವಿಕತೆ ಮತ್ತು ಸದವಕಾಶ! ಇನ್ನೊಂದೆಡೆಯಲ್ಲಿ ಎಂಥಾ ಶೋಧನೆ! ದೇವರು ನಮ್ಮ ದಯೆಯ ಮೇಲಿದ್ದಾನೆ. ಪ್ರಾರ್ಥನೆಯು ನಮ್ಮ ಸಮಯದಲ್ಲಿರುವುದು ಮತ್ತು ನಮ್ಮ ಕರಾರುಗಳ ಮೇಲೆ ಇರುವುದು. ದೇವರು "ತುಣುಕುಗಳನ್ನು" ಮಾತ್ರ ಹೊಂದಿಕೊಳ್ಳುವನು. ದೇವರು ಕೊನೆಯವನೂ ಕನಿಷ್ಠನೂ ಆಗಿದ್ದಾನೆ! ಹೌದು, ಜೀವನವು ಕೆಲವು ಸಲ ನಮ್ಮ ನಿಯಂತ್ರಣವನ್ನು ದಾಟಿ ಇರುವುದು. ಹೀಗಿದ್ದರೂ, ನಾವು ಪ್ರಾರ್ಥನೆಗೆ ನಮ್ಮನ್ನು ಸಮರ್ಪಿಸಿಕೊಳ್ಳತಕ್ಕದ್ದು. ನಾವು ತಿನ್ನುತ್ತೇವೆ. ನಾವು ಮಲಗುತ್ತೇವೆ. ನಾವು ಪ್ರಾರ್ಥಿಸುತ್ತೇವೆ. ನಮಗೆ ಪ್ರಾರ್ಥಿಸಲು ಒಂದು ಸಮಯ ಮತ್ತು ಒಂದು ಸ್ಥಳಬೇಕು. ಪ್ರಾರ್ಥನೆಗೆ ಪ್ರಾಧಾನ್ಯತೆ ಇರಬೇಕು *ಮೊದಲು ಪ್ರಾರ್ಥಿಸಿರಿ*! ಪ್ರಾರ್ಥನೆಗೆ ಕೆಲಸವಾಗಿದೆ, ಕಠಿಣವಾದ ಕೆಲಸವಾಗಿದೆ. ಪ್ರತಿದಿನವೂ ಕೇಳುವದಕ್ಕಾಗಿಯೂ ಕಾದುಕೊಂಡಿರುವದಕ್ಕಾಗಿಯೂ ನಿಂತುಕೊಳ್ಳಬೇಕೆಂದು ನಮ್ಮನ್ನು ಕೇಳುತ್ತದೆ! ನಾವು ಹೆಚ್ಚು ಕಾರ್ಯನಿರತರಾಗಿರುವಂತೆ, ನಾವು ಹೆಚ್ಚು ಪ್ರಾರ್ಥಿಸಬೇಕು!

## ಸಿದ್ಧತೆಯ ಕೊರತೆ

ಸಿದ್ಧತೆಯು ನಿರ್ಣಾಯಕವಾಗಿದೆ, ಆದಾಗ್ಯೂ ಅದು ಸಾಮಾನ್ಯವಾಗಿ ಕಡೆಗಣಿಸಲ್ಪಟ್ಟಿದೆ. ನೀವು ಪ್ರಾರ್ಥನೆಯೊಳಗೆ ಇಲ್ಲವೇ ನಿತ್ಯವಾಗಿ ಅರ್ಥಗರ್ಭಿತವಾದ ಯಾವುದೇ ಸಂಗತಿಯೊಳಗೆ ನೀವು ನುಗ್ಗಬಾರದು. ಕೋಚ್ ಬಡ್ ವಿಲ್ಕಿನ್‌ಸನ್ ಅವರು "ಅದು ಗೆಲ್ಲುವದಕ್ಕಾಗಿ ಚಿತ್ತವಲ್ಲ; ಅದು ಸಿದ್ಧತೆಗೊಳ್ಳಲು ಚಿತ್ತ" ಎಂದು ಬುದ್ಧಿವಂತಿಕೆಯಿಂದ ಹೇಳಿದ್ದಾರೆ. ದೊಡ್ಡ ಸಂಗತಿಗಳು ದೊಡ್ಡ ಸಿದ್ಧತೆಯನ್ನು ಕೇಳುತ್ತವೆ. ದೊಡ್ಡ ಮದುವೆಗಳು ಅಪಾರವಾದ ಸಿದ್ಧತೆಯನ್ನು ಕೇಳುತ್ತವೆ. ಅನೇಕ ದಂಪತಿಗಳು ತಮ್ಮ ವಿವಾಹಕ್ಕಿಂತ ಹೆಚ್ಚಾಗಿ ತಮ್ಮ ಮದುವೆಗೆ ಹೆಚ್ಚು ಸಿದ್ಧತೆಮಾಡುವುದು ದುಃಖಕರವಾದ ಸಂಗತಿಯಾಗಿರುತ್ತದೆ. ದೇವರನ್ನು ಸಂಧಿಸುವದಕ್ಕಾಗಿ ಒಬ್ಬನು ತನ್ನನ್ನು ಶುದ್ಧೀಕರಿಸಿಕೊಳ್ಳಬೇಕು.

"ಸಿದ್ಧತೆಯು ಅತಿ ಕಠಿಣವಾದ ಭಾಗವಾಗಿದೆ" ಎಂದು ನಾನು ಬಾಲಕನಾಗಿದ್ದಾಗ ಫಾರ್ಮಿನಲ್ಲಿ ಕಲಿತುಕೊಂಡೆನು. ಬೇಲಿಯನ್ನು ಕಟ್ಟುವದಕ್ಕಾಗಿ, ಒಬ್ಬನು ಸಲಕರಣೆಗಳನ್ನು ಸಂಗ್ರಹಿಸಬೇಕು, ಸಲಕರಣೆಗಳನ್ನು ಟ್ರಾಕ್ಟರುಗಳ ಮೇಲೆ ಹಾಕಬೇಕು, ಗಿಡಗಳನ್ನು ಕತ್ತರಿಸಬೇಕು, ಮತ್ತು ತಗ್ಗುಗಳನ್ನು ಜಿಗಿಯಬೇಕು. ಬೇಲಿಕಟ್ಟುವುದು ಸುಲಭವಾದ ಭಾಗ. ನಮ್ಮ ಅನೇಕ ಪ್ರಾರ್ಥನೆಗಳು ಸಂಪೂರ್ಣವಾಗಿ ಸಿದ್ಧತೆಯಿಲ್ಲದವುಗಳಾಗಿರುತ್ತವೆ, ಅನ್ಯರು, "ಹೇಳಿದ್ದನ್ನೇ ಅರ್ಥವಿಲ್ಲದೇ ಹೇಳುವುದನ್ನು" ಅನ್ಯರು ಉಪಯೋಗಿಸಿದರು (ಮತ್ತಾಯ 6).

ನಮ್ಮ ಪ್ರಾರ್ಥನೆಗಳು ಸವಕಲು ಮಾತು, ಬರಿದಾದ ನಾದವೂ ಆಗಿರುತ್ತವೆ. ನಮ್ಮ ಬಹಿರಂಗ ಪ್ರಾರ್ಥನೆಯು ಸಿದ್ಧಪಡಿಸಲ್ಪಡ*ತಕ್ಕದ್ದು*! ಸ್ಮರಣೆಗೆ ಸಹಾಯ ಮಾಡಲು ಟಿಪ್ಪಣಿಗಳನ್ನು ಮಾಡಿಕೊಳ್ಳತಕ್ಕದ್ದು. ಕೆಲವು ಸಂಗತಿಗಳು ಬಹಳ ಶ್ರೇಷ್ಠವಾದವುಗಳಾಗಿವೆ. "ಸಿದ್ಧತೆಯು ಕಠಿಣವಾದ ಭಾಗವಾಗಿದೆ." ನಾವು ಸಿದ್ಧತೆ ಮಾಡಿಕೊಳ್ಳಲು ಸೋತು ಹೋದ ಕಾರಣದಿಂದ ನಾವು ಪ್ರಾರ್ಥಿಸಲು ಸೋತುಹೋಗುತ್ತೇವೆ. ಸಿದ್ಧತೆ

ಮಾಡಲಿಕ್ಕೆ ನಮ್ಮ ಸೋಲುವಿಕೆಯು ನಮ್ಮ ಪ್ರಾರ್ಥನೆಗಳಿಗೆ ಆತಂಕ ಮಾಡುತ್ತದೆ.

## ಪ್ರಾರ್ಥಿಸಲ್ಪಡದ ಪ್ರಾರ್ಥನೆಗಳು

"ಉತ್ತರಿಸಲ್ಪಡದ ಪ್ರಾರ್ಥನೆಗಳ" ಬಗ್ಗೆ ಹೆಚ್ಚಾದವರು ಚಿಂತಿಸುತ್ತಾರೆ; ನಿಜವಾದ ಸಮಸ್ಯೆಯು "ಪ್ರಾರ್ಥಿಸಲ್ಪಡದ ಪ್ರಾರ್ಥನೆಗಳು." ನಾವು ಕೇಳದೇ ಇರುವದರಿಂದ ನಾವು ಪಡೆದುಕೊಳ್ಳಲಾರೆವು (ಯಾಕೋಬ 4:2). ನಮ್ಮ ಅತಿ ದೊಡ್ಡ ಪಾಪವು ಮತ್ತು ತಪ್ಪು, ಪ್ರಾರ್ಥಿಸದೇ ಇರುವಂಥದ್ದು. ನಾವು ಸ್ವೀಕರಿಸುವದಕ್ಕಿಂತಲೂ ಎಷ್ಟೋ ಹೆಚ್ಚಾಗಿ ನಮ್ಮನ್ನು ಆಶೀರ್ವದಿಸಲು ದೇವರು ಸಿದ್ಧವಾಗಿದ್ದಾನೆ. ಪ್ರಾರ್ಥಿಸದೇ ಇರುವಲ್ಲಿ, ನಾವು ದೇವರ ಆಶೀರ್ವಾದಗಳನ್ನು ಕಳೆದುಕೊಳ್ಳುವಷ್ಟೇ ಅಲ್ಲ, ನಾವು ಪಾಪವನ್ನೂ ಮಾಡುತ್ತೇವೆ! ನಾವು ಪ್ರಾರ್ಥಿಸಬೇಕು ಮತ್ತು ಬೇಸರಗೊಳ್ಳಬಾರದು ಎಂದು ಯೇಸು ಹೇಳಿದ್ದಾನೆ (ಲೂಕ 18:1). ಪ್ರಾರ್ಥಿಸಲ್ಪಡದ ಪ್ರಾರ್ಥನೆಗಳ ಅಹಂಕಾರ ಮತ್ತು ದುರಹಂಕಾರ! ಅವು ಕ್ರಮಪಡಿಸಲ್ಪಡುವವರೆಗೆ ಆಶೀರ್ವದಗಳು ಕೊಡಲ್ಪಡುವದಿಲ್ಲ. ಬೇಡಿಕೊಳ್ಳಿರಿ ... ಹುಡುಕಿರಿ ... ತಟ್ಟಿರಿ! ದೇವರು ನಮ್ಮನ್ನು ಆಮಂತ್ರಿಸುತ್ತಾನೆ, ಬೇಡಿ ಕೊಳ್ಳುತ್ತಾನೆ, ಒತ್ತಾಯ ಮಾಡುತ್ತಾನೆ, ಮತ್ತು ಪ್ರಾರ್ಥಿಸಲು ಬಿನ್ನವಿಸುತ್ತಾನೆ!

ತಂದೆಗಳು ತಮ್ಮ ಮಕ್ಕಳನ್ನು ಆಶೀರ್ವದಿಸಲು ಬಯಸುತ್ತಾರೆ. ತಮ್ಮ ಮಕ್ಕಳು ತಮ್ಮನ್ನು ಕೇಳಬೇಕೆಂದು ಬಯಸುತ್ತಾರೆ. "ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪರಿಶುದ್ಧಾತ್ಮ ವರವನ್ನು ಕೊಡುವನಲ್ಲವೇ?" (ಲೂಕ 11:13). ನಾವು ಸುಮ್ಮನೇ ಕೇಳಿಕೊಳ್ಳುವದಿಲ್ಲ! ನಮ್ಮ ಅಗತ್ಯತೆಗಳು ಅತೀಯಾಗಿ ದೊಡ್ಡವುಗಳಾಗಿವೆ. ಇಲ್ಲವೇ ಅತೀಯಾಗಿ ಚಿಕ್ಕವುಗಳಾಗಿವೆ ಎಂದು ಯೋಚಿಸುತ್ತೇವೆ! ಒದಗಿಸಿಕೊಡಲು ದೇವರು ಕುತೂಹಲಭರಿತನಾಗಿದ್ದಾನೆ. ವಿಶ್ವಾಸಿಗಳಾಗಿ, ನಮಗೆ ಕೆಲಸಮಾಡುವದಕ್ಕೆ ಇಲ್ಲವೇ ಚಿಂತಿಸುವದಕ್ಕೆ ನಮಗೆ ಹಕ್ಕು ಇರುವ ಯಾವುದಕ್ಕಾಗಿಯಾದರೂ ಪ್ರಾರ್ಥಿಸಲಿಕ್ಕೆ ನಮಗೆ ಒಂದು ದೈವಿಕ ಹಕ್ಕು ಇರುತ್ತದೆ! ಕೃತಿಗಳಿಲ್ಲದ ಪ್ರಾರ್ಥನೆಯು ಸತ್ತದ್ದಾಗಿದೆ. ಪ್ರಾರ್ಥನೆಯಿಲ್ಲದ ಕಾರ್ಯಗಳೂ ಸತ್ತವುಗಳಾಗಿವೆ. ದೇವರು ಕ್ರೈಸ್ತರನ್ನು ಅವರು "ತಮ್ಮ ಮೊಣಕಾಲುಗಳ ಮೇಲೆ" ಇರುವದನ್ನು ಕಂಡಕೊಳ್ಳುವಾಗ, ಅವರನ್ನು "ಅವರ ಪಾದಗಳ ಮೇಲೆ" ನಿಲ್ಲಿಸುತ್ತಾನೆ. ಕ್ರೈಸ್ತ ಪ್ರಾರ್ಥನೆಗಳು ಮೇಲಕ್ಕೇರುವಾಗ, ದೇವರ ಶಕ್ತಿಯು ಕೆಳಗಿಳಿದು ಬರುವುದು.

## ಪಾಪ – ಪಾಪ – ಪಾಪ

ಅಗಾಧವಾದ ಪ್ರಾರ್ಥನೆಯು ಸರಿಯಾದ ಯೋಚಿಸುವಿಕೆಯಿಂದಲೂ ಸರಿಯಾದ ಜೀವಿಸುವಿಕೆಯಿಂದಲೂ ಮಾತ್ರವೇ ಬರಬಹುದು. ನಿತ್ಯವಾದ ಪ್ರಾರ್ಥನೆಯ ಅಸ್ತಿವಾರವು ದೇವರೊಂದಿಗೆ ಸರಿಯಾದ ಸಂಬಂಧವಾಗಿರುತ್ತದೆ. ನಾವು ರಕ್ಷಿಸಲ್ಪಡತಕ್ಕದ್ದು - ಕಳೆದುಹೋಗಬಾರದು. ನಾವು ದೇವರ ಮಕ್ಕಳಾಗಿರತಕ್ಕದ್ದು - ಸೈತಾನನ ಮಕ್ಕಳಾಗಿರ ಬಾರದು! ಪ್ರಾರ್ಥನೆ ಮತ್ತು ಅವಿಧೇಯತೆಯು ಮಿಶ್ರವಾಗುವದಿಲ್ಲ! ಪರಿಶುದ್ಧ ಬರಹಗಳಲ್ಲಿ ಮೂವತ್ತಕ್ಕಿಂತಲೂ ಹೆಚ್ಚು ಸಲ ದೇವರು ಕೆಲವು ಪ್ರಾರ್ಥನೆಗಳಿಗೆ ಉತ್ತರ ಕೊಡಲಿಲ್ಲ, ಉತ್ತರ ಕೊಡುವದಿಲ್ಲ ಎಂದು ಕಲಿತುಕೊಳ್ಳುತ್ತೇವೆ. ಸಾಮಾನ್ಯವಾಗಿ ಸಮಸ್ಯೆಯು ಪಾಪವಾಗಿತ್ತು.

ಧರ್ಮೋಪದೇಶಕ್ಕೆ ಕಿವಿಗೊಡದವನು ಮಾಡುವ ದೇವಪ್ರಾರ್ಥನೆಯೂ ಅಸಹ್ಯ (ಜ್ಞಾನೋಕ್ತಿ 28:9).

ದುಷ್ಟರ ಯಜ್ಞ ಯೆಹೋವನಿಗೆ ಅಸಹ್ಯ; ಶಿಷ್ಟರ ಬಿನ್ನಪ ಆತನಿಗೆ ಒಪ್ಪಿತ (ಜ್ಞಾನೋಕ್ತಿ 15:8).

ಯೆಹೋವನು ದುಷ್ಟರಿಗೆ ದೂರ, ಶಿಷ್ಟರ ಬಿನ್ನಹಕ್ಕೆ ಹತ್ತಿರ (ಜ್ಞಾನೋಕ್ತಿ 15:29).

ನಾನು ಕೆಟ್ಟತನದ ಮೇಲೆ ಮನಸ್ಸಿಟ್ಟಿದ್ದರೆ ಸ್ವಾಮಿಯು ನನ್ನ ವಿಜ್ಞಾಪನೆಯನ್ನು ಕೇಳುತ್ತಿದ್ದಿಲ್ಲ (ಕೀರ್ತನೆ 66:18).

ಯಾಕಂದರೆ ಕರ್ತನು ನೀತಿವಂತರನ್ನು ಕಟಾಕ್ಷಿಸುತ್ತಾನೆ, ಆತನು ಅವರ ವಿಜ್ಞಾಪನೆಗಳಿಗೆ ಕಿವಿಗೊಡುತ್ತಾನೆ. ಕೆಡುಕರಿಗೋ ಕರ್ತನು ಕೋಪದ ಮುಖವುಳ್ಳವನಾಗಿರುತ್ತಾನೆ (1 ಪೇತ್ರ 3:12).

ಮತ್ತು ನಾವು ಆತನ ಆಜ್ಞೆಗಳನ್ನು ಕೈಕೊಂಡು ಆತನ ಎಣಿಕೆಯಲ್ಲಿ ಮೆಚ್ಚಿಕೆಯಾದ ಕಾರ್ಯಗಳನ್ನು ಮಾಡುವವರಾಗಿರುವದರಿಂದ ಏನು ಬೇಡಿ ಕೊಂಡರೂ ಆತನಿಂದ ಹೊಂದುವೆವು (1 ಯೋಹಾನ 3:22).

ಈ ವಚನಗಳು ಸರಳವಾದವುಗಳೂ ಸುಲಭವಾದವುಗಳೂ ಆಗಿರುತ್ತವೆ. ದೇವರಿಗೆ ಕಿವಿಗೊಡುವದನ್ನು ನಾವು ತಿರಸ್ಕರಿಸುವಾಗ, ಆತನು ನಮಗೆ ಕಿವಿಗೊಡುವದಿಲ್ಲ. ಪಾಪವು ನಮ್ಮನ್ನು ಪ್ರಾರ್ಥನೆಯಿಂದ ದೂರವಿಡುತ್ತದೆ, ಮತ್ತು ಪ್ರಾರ್ಥನೆಯು ಪಾಪದಿಂದ ನಮ್ಮನ್ನು ದೂರ ಇಡುತ್ತದೆ. ಹೀಗಿರುವದರಿಂದ, ಎಚ್ಚರಿಕೆಯುಳ್ಳವರಾಗಿರಿ. ಒಳ್ಳೆಯತನವು ಲಂಚತನವಾಗಿರುವದಿಲ್ಲ! ಪ್ರಾರ್ಥನೆಯು ಒಪ್ಪಂದವಾಗಿರುವದಿಲ್ಲ. ಆಶೀರ್ವದಿಸಲ್ಪಡುವದಕ್ಕಾಗಿ ಒಬ್ಬನು ಒಳ್ಳೆಯದನ್ನು ಮಾಡುವದಿಲ್ಲ. ದೇವರು ಒಳ್ಳೆ ಯದನ್ನು ಸುಮ್ಮನೇ ಆಶೀರ್ವದಿಸುತ್ತಾನೆ. ಒಳ್ಳೆಯವರು ಮಾತ್ರವೇ ಆಶೀರ್ವದಿಸಲ್ಪಡುವ ಸ್ಥಾನದಲ್ಲಿದ್ದಾರೆ. ಕೇಳಲ್ಪಡುವದಕ್ಕಾಗಿ ಮನುಷ್ಯನು ಸಂಪಾದಿಸಬೇಕಾಗಿರುವದಿಲ್ಲ. ದೇವರು ದಯೆಯ ಮೇಲೆ ಇರುವದಿಲ್ಲ, ಆದರೆ ದೀನತೆಯುಳ್ಳ ಜನರಿಗೆ ದೇವರ ಹೃದಯಕ್ಕೆ ಪ್ರವೇಶವಿದೆ!

## ಸಂಶಯ

ನಾವು ಪ್ರಾರ್ಥಿಸುವಾಗ ನಂಬತಕ್ಕದ್ದು - ಪ್ರಾರ್ಥನೆಯು ನಂಬಿಕೆಯ ಮಾತಾಡುವಿಕೆಯಾಗಿದೆ. "... ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳ ಬೇಕು ..." (ಯಾಕೋಬ 1:5, 6); "ಹೀಗಿರಲಾಗಿ ಪುರುಷರು ಎಲ್ಲಾ ಸ್ಥಳಗಳಲ್ಲಿ ಕೋಪವೂ ವಾಗ್ವಾದವೂ ಇಲ್ಲದವರಾಗಿ ಭಕ್ತಿಪೂರ್ವಕವಾಗಿಯೇ ಕೈಗಳನ್ನೆತ್ತಿ ಪ್ರಾರ್ಥಿಸ ಬೇಕೆಂದು ಅಪೇಕ್ಷಿಸುತ್ತೇವೆ" (1 ತಿಮೊಥೆ 2:8). ನಾವು ಆಶೀರ್ವದಿಸಲ್ಪಡುವದನ್ನು ನಿರೀಕ್ಷಿಸದೇ ಇರುವದರಿಂದ ನಾವು ಆಶೀರ್ವದಿಸಲ್ಪಟ್ಟಿರುವದಿಲ್ಲ. ಪ್ರಾರ್ಥನೆಯು ನಿರೀಕ್ಷೆ ಮತ್ತು ಧೈರ್ಯ ಎರಡನ್ನೂ ಒಳಗೊಂಡಿರುತ್ತದೆ. ಮನಷ್ಯನು ಪ್ರಾರ್ಥನೆಯಲ್ಲಿ ತನ್ನ ತಲೆ "ಬಾಗಿಸಲ್ಪಟ್ಟಿರುವಾಗ," "ಮೇಲಕ್ಕೆ ನೋಡುತ್ತಾನೆ." ಮಳೆಗಾಗಿ ಒಂದು ಪ್ರಾರ್ಥನಾ

ಕೂಟಕ್ಕೆ ಒಬ್ಬ ಹಿರಿಯ ಸಹೋದರಿಯು ತನ್ನ ಕೊಡೆಯನ್ನು ತೆಗೆದುಕೊಂಡು ಹೋದ ಕಥೆಯ ಬಗ್ಗೆ ನಾವೆಲ್ಲರೂ ಆನಂದ ಪಡುತ್ತೇವೆ! ನಾವು ನಿರೀಕ್ಷಿಸದೇ ಇರುವ ಸಂಗತಿಗಳಿಗಾಗಿ ನಾವು ಪ್ರಾರ್ಥಿಸುವದಲ್ಲದೇ - ಕೆಲವು ಸಲ ನಾವು ನಿಜ ವಾಗಿ ಬಯಸದೇ ಇರುವ ಸಂಗತಿಗಳಿಗಾಗಿಯೂ ಪ್ರಾರ್ಥಿಸುತ್ತೇವೆ! ಹೆಂಡತಿಯರು ಕ್ರೈಸ್ತರಾಗಬೇಕೆಂದು ತಮ್ಮ ಗಂಡಂದಿರಿಗಾಗಿ ಪ್ರಾರ್ಥಿಸುತ್ತಾರೆ, ಆದಾಗ್ಯೂ ಅವರು ಪಶ್ಚಾತ್ತಾಪಪಡುವದನ್ನು ನಿರೀಕ್ಷಿಸುವದಿಲ್ಲ ಇಲ್ಲವೇ ಬಯಸುವದಿಲ್ಲ. ಸಭೆಗಳು ಸಿದ್ಧತೆಯಿಲ್ಲದೆ ಇಲ್ಲವೇ ನಂಬಿಗಸ್ತ ಹಾಜರಾತಿಯಿಲ್ಲದೇ ಭಕ್ತಿ ಸಂಜೀವನಕ್ಕಾಗಿ ಪ್ರಾರ್ಥಿಸುತ್ತೇವೆ.

ದೇವರು ಒಳ್ಳೆಯವನಾಗಿದ್ದಾನೆ. ಸಹಾಯ ಕೇಳುತ್ತ ನಂಬಿಕೆಯಿಂದ ಯೇಸುವಿನ ಬಳಿಗೆ ಬಂದ ಯಾರೂ ತಾನು ಬಯಸಿದ್ದನ್ನು - ಇಲ್ಲವೇ ಹೆಚ್ಚಾದದನ್ನು ಹೊಂದಿ ಕೊಳ್ಳದೇ ಹೋಗಲಿಲ್ಲ! ಅವರು ಯಾವಾಗಲೂ ತಾವು ಕೇಳಿದ್ದನ್ನು ಹೊಂದಿಕೊಳ್ಳಲಿಲ್ಲ, ಆದರೆ ಯಾವಾ ಗಲೂ ತಮಗೆ ಅಗತ್ಯವಾದದ್ದನ್ನು ಹೊಂದಿಕೊಂಡರು. ಎಂಥಾ ರಕ್ಷಕ! ಆತನು ಅವರ ದೇಹಗಳನ್ನು ಸ್ವಸ್ಥಪಡಿಸಿದ್ದಲ್ಲದೇ, ಅವರ ಪ್ರಾಣಗಳನ್ನೂ ರಕ್ಷಿಸಿದನು! ಇಸ್ರಾಯೇಲು ದೇವರ ಕಡೆಗೆ ತಿರುಗಿಕೊಂಡಾಗ, ಆತನು ಅವರನ್ನು ಆಶೀರ್ವದಿಸಿದನು. ನಂಬಿಕೆಯಲ್ಲಿ ಪ್ರಾರ್ಥಿಸಿದ ಮನುಷ್ಯನು ದೇವರಿಂದ ತಿರಸ್ಕಾರಪಡುವದರ ಬಗ್ಗೆ ಬೈಬಲಿನಲ್ಲಿ ಯಾವುದೇ ಉದಾಹರಣೆ ಇರುವದಿಲ್ಲ. ಪೌಲನು ಮುಳ್ಳನ್ನು ತೆಗೆಯಲು ಪ್ರಾರ್ಥಿಸಿದಾಗಲೂ ಸಹ ದೇವರು ಅವನಿಗೆ ಅದಕ್ಕಿಂತ ಹೆಚ್ಚಾದದ್ದನ್ನು - ಕೃಪೆಯನ್ನು ಅವನಿಗೆ ಕೊಟ್ಟನು (2 ಕೊರಿಂಥ 12). ದೇವರು ಕೊಡುವಂಥದ್ದಕ್ಕೆ ನಾವು ಕೃತಜ್ಞತೆಯಿಂದ ಇರದಿದ್ದರೆ, ಆತನು ನಮಗೆ ಇನ್ನೂ ಹೆಚ್ಚು ಯಾಕೆ ಕೊಡಬೇಕು? ನೀವು ದ್ವಂದ್ವ - ಮನಸ್ಸಿನವರಾ ಗಿದ್ದರೆ, ದೇವರಿಂದ ಯಾವುದನ್ನೂ ನಿರೀಕ್ಷಿಸಬೇಡಿರಿ (ಯಾಕೋಬ 1:6-8). ಭಯಭಕ್ತಿ ತರುವ ವಿಚಾರವು ಇಬ್ರಿಯ 4:3ರಲ್ಲಿ ಪ್ರಕಟವಾಗಿರುವುದು: "ದೇವರ ಕೆಲಸಗಳು ಲೋ ಕಾದಿಯಿಂದ ಮುಗಿದು ಹೋಗಿ [ಆತನ ವಿಶ್ರಾಂತಿಯು ಸಿದ್ಧವಾಗಿದ್ದರೂ] ಆತನು - ನನ್ನ ವಿಶ್ರಾಂತಿಯಲ್ಲಿ ಇವರು ಸೇರುವುದೇ ಇಲ್ಲವೆಂದು ಕೋಪಗೊಂಡು ಪ್ರಮಾಣ ಮಾಡಿದೆನು ಎಂಬುದಾಗಿ ಹೇಳಿ ದೆನಷ್ಟೆ." ಜಗತ್ತು ಸೃಷ್ಟಿಸಲ್ಪಡುವದಕ್ಕಿಂತ ಮೊದಲೇ ದೇವರು ಪ್ರತಿಯೊಬ್ಬ ಮಾನವನ ಅಗತ್ಯತೆಗಾಗಿ ಉತ್ತರವನ್ನು ಒದಗಿಸಿದನು. ವಿಶ್ವಾಸವಿಲ್ಲದವರು ಪ್ರಾರ್ಥನೆಯನ್ನು ವ್ಯರ್ಥಗೊಳಿಸುವರು.

ಪ್ರಾರ್ಥನೆಯು ಕೆಲಸ ಮಾಡುವದಕ್ಕೆ, ಯೋಚಿಸುವುದಕ್ಕೆ, ಕಾಯುವುದಕ್ಕೆ, ಶ್ರಮೆಪಡುವದಕ್ಕೆ, ಇಲ್ಲವೇ ಕೊಡುವುದಕ್ಕೆ ಪರ್ಯಾಯವಾದದ್ದಾಗಿರುವದಿಲ್ಲ. ಅಂಥ ಎಲ್ಲಾ ಪ್ರಯತ್ನಗಳಿಗೆ ಪ್ರಾರ್ಥನೆಯು ಬೆಂಬಲವಾಗಿದೆ. ನಿಮ್ಮ ಸ್ವಂತ ಬಲದಕೆಳಗೆ ಅಲ್ಪವನ್ನು ಸಾಧಿಸುವಿರಿ ಇಲ್ಲವೇ ಏನನ್ನೂ ಸಾಧಿಸುವದಿಲ್ಲ; ಆದಾಗ್ಯೂ ನಿನ್ನ ಎಲ್ಲಾ ಶಕ್ತಿಯೊಂದಿಗೆ ನಿನ್ನ ಕೆಲಸ ಮಾಡದಿದ್ದರೆ ದೇವರು ನಿನಗೆ ಹೆಚ್ಚಾದದ್ದನ್ನು ಕೊಡುವದಿಲ್ಲ. ಪ್ರಾರ್ಥನೆಯು ಸಹಾಯವಿಲ್ಲದವರಿಗಾಗಿ ಇರುತ್ತದೆ.

ಪ್ರಾರ್ಥನೆ ಮತ್ತು ಯಶಸ್ಸಿನ ಗುಣಲಕ್ಷಣಗಳು ಒಂದಕ್ಕೊಂದು ಹೊಂದಿಕೊಳ್ಳು ವದಿಲ್ಲ. ನೀವು ಯಾವುದಕ್ಕಾಗಿ ಕೃತಜ್ಞತರಾಗಿರುವಿರೋ ಮತ್ತು ಇತರರೊಂದಿಗೆ ಹಂಚಿಕೊಳ್ಳುತ್ತಿರುವಿರೋ ಅದಕ್ಕಿಂತ ಹೆಚ್ಚಾದದ್ದನ್ನು ನಿಮಗೆ ಕೊಡಬೇಕೆಂದು ದೇವರನ್ನು ಬೇಡಿಕೊಳ್ಳಬೇಡಿರಿ. ನೀವು ಅಪನಂಬಿಗಸ್ತರಾಗಿರುವಾಗ ನಿಮ್ಮ ಸಂದಿಗ್ಧ ಪರಿಸ್ಥಿತಿಯಲ್ಲಿ ದೇವರು ಧುಮುಕಬೇಕೆಂದು ದೇವರನ್ನು ಕೇಳಿಕೊಳ್ಳಬೇ ಡಿರಿ! ಸಂಶಯದ "ಪ್ರಾರ್ಥನೆಯ ಪ್ರತಿಮೆ"ಯಿಂದ ದೂರದಲ್ಲಿ ಇರ್ರಿ. ನಿಮ್ಮ ಸ್ವಂತ ಹೃದಯವನ್ನು ಹುಡುಕಿರಿ - ನೀವು ಬೇಡಿಕೊಂಡದ್ದನ್ನು ಹೊಂದಿಕೊಳ್ಳುವದಕ್ಕಾಗಿ

ಆಳವಾಗಿ ನಿರೀಕ್ಷಿಸುತ್ತಿರುವಿರೋ?

## ಇತರರನ್ನು ಕ್ಷಮಿಸುವುದು

ಸಭ್ಯವಾಗಿ ಮರೆತಿರುವ ವಿಷಯಗಳಲ್ಲಿ ಒಂದು, ಇತರರ ಕಡೆಗಿರುವ ನಮ್ಮ ಮನೋಭಾವನೆ ಮತ್ತು ಆಚರಣೆ. ನಾವು ಇತರರೊಂದಿಗೆ ದೂರಹೋಗಿರುವಾಗ, ನಾವು ದೇವರೊಂದಿಗೆ ಸರಿಯಾಗಿ ಇರಲಾರೆವು. ನಾವು ಇತರರನ್ನು ಹೇಗೆ ನಡಿಸಿಕೊಳ್ಳುತ್ತೇವೆ ಎಂಬುದು ದೊಡ್ಡ ರೀತಿಯಲ್ಲಿ ದೇವರು ನಮ್ಮನ್ನು ಹೇಗೆ ನಡಿಸಿಕೊಳ್ಳುವನು ಎಂಬುದನ್ನು ನಿರ್ಧರಿಸುವುದು. *ಜನರನ್ನು ಸರಿಯಾಗಿ ನಡಿಸಿಕೊಳ್ಳಿರಿ!* ವಿಷಯದ ಕೇಂದ್ರವು ಗರ್ವ ವಾಗಿರುವುದು. ನಾವು ಗರ್ವಿಗಳಾಗಿರುವಾಗ ನಾವು ದ್ವೇಷದಲ್ಲಿ, ವೈರತ್ವದಲ್ಲಿ, ಮತ್ತು ಮತ್ಸರದಲ್ಲಿ ಜೀವಿಸುವೆವು. ನಮ್ಮ ಸ್ವಾರ್ಥಕ್ಕಾಗಿ ನಾವು ಜನರನ್ನು ಉಪಯೋಗಿಸು ವೆವು. ಪ್ರಾರ್ಥನೆಯು ಸಹಾಯಹೀನರಿಗಾಗಿರುವುದು ಎಂದು ನಾವು ಈಗಾಗಲೇ ಕಲಿತಿರುವದರಿಂದ, ಅವಲಂಬನೆಯು ಎಲ್ಲಾ ದುರ್ಗುಣಗಳನ್ನು ತೆಗೆದು ಹಾಕುವದೆಂದು ನಾವು ತೀರ್ಮಾನಿಸತಕ್ಕದ್ದು. ನಾವೆಲ್ಲರೂ ರೊಟ್ಟಿಯ ಅಗತ್ಯತೆಯುಳ್ಳವರೂ ಅದನ್ನು ಹಂಚಿಕೊಳ್ಳುವವರೂ ಆಗಿದ್ದೇವೆ. ನಮ್ಮೆಲ್ಲರಿಗೂ ದೇವರ ಅಗತ್ಯತೆಯಿರುವದರಿಂದ, ನಮ್ಮೆಲ್ಲರಿಗೂ ಒಬ್ಬರೊಬ್ಬರ ಅಗತ್ಯತೆಯಿರುತ್ತದೆ. ಮಾನವ ಸಂಬಂಧಗಳ ಮೌಲ್ಯವನ್ನು ಒತ್ತಿ ಹೇಳಲು ಮತ್ತಾಯ 5 ಮತ್ತು 18ನೆಯ ಅಧ್ಯಾಯಗಳು ಹೆಚ್ಚು ವಿವರಗಳನ್ನು ಕೊಡುತ್ತವೆ. ಸಹೋದರರು ಸಹೋದರರೊಂದಿಗೆ ಘರ್ಷಣೆಯಲ್ಲಿ ಇರುವಾಗ, ಅವರ ಪ್ರಾರ್ಥನೆಯ ಜೀವಿತವು ತೊಂದರೆಗೊಳಗಾಗುವುದು.

"ಇರುವುದಾಗಿರಬಹುದು, ಇಲ್ಲವೇ ಇಲ್ಲದಿರುವುದು ಆಗಿರಬಹುದು" ಎಂದು ಶೇಕ್ಸ್‌ಪಿಯರ್ ಹೇಳಿದನು. "ಕ್ಷಮಿಸುವುದಾಗಿರಬಹುದು, ಇಲ್ಲವೇ ಕ್ಷಮಿಸದೆ ಇರುವುದು ಆಗಿರಬಹುದು" ಎಂದು ಯೇಸು ಹೇಳಿದನು.

> "ನೀವು ನಿಂತುಕೊಂಡು ಪ್ರಾರ್ಥನೆಮಾಡುವಾಗೆಲ್ಲಾ, ಯಾರ ಮೇಲೆ ಏನಾದರೂ ವಿರೋಧವಿದ್ದರೆ ಅದನ್ನು ಅವನಿಗೆ ಕ್ಷಮಿಸಿರಿ; ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ಸಹ ನಿಮ್ಮ ತಪ್ಪುಗಳನ್ನು ನಿಮಗೆ ಕ್ಷಮಿಸಿಬಿಡುವನು" (ಮಾರ್ಕ 11:25).

> "ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನೂ ಕ್ಷಮಿಸುವನು. ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆ ಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವದಿಲ್ಲ" (ಮತ್ತಾಯ 6:14, 15).

> ಬಡವನ ಮೊರೆಗೆ ಕಿವಿಮುಚ್ಚಿಕೊಳ್ಳುವವನು ತಾನೇ ಮೊರೆಯಿಡುವಾಗ ಯಾರೂ ಉತ್ತರಕೊಡರು (ಜ್ಞಾನೋಕ್ತಿ 21:13).

ಮತ್ತಾಯ 5ರಲ್ಲಿ ಯೇಸುವು ಆರಾಧನೆಗಿಂತ ಮೊದಲು ಸಂಧಾನದ ಬಗ್ಗೆ ಬೋ ಧಿಸಿದನು. ಕ್ಷಮಿಸದೇ ಇರುವಂಥವನು ತಾನು ದಾಡಿಹೋಗಬೇಕಾದ ಸೇತುವೆ ಯನ್ನು ನಾಶಗೊಳಿಸುವನು. ನಾವು ಕ್ಷಮಿಸದಿದ್ದರೆ ದೇವರು ನಮ್ಮನ್ನು ಕ್ಷಮಿಸುವದಿಲ್ಲ. ಕ್ಷಮಾಪಣೆಯು ದುರಾಗ್ರಹಗಳನ್ನು, ಅಸೂಯೆಗಳನ್ನು ಮತ್ತು ಅಸಮಾಧಾನವನ್ನು ಒಳಗೊಂಡಿರುವುದು! ಇತರರಿಗಾಗಿ ನಾವು ಮಾಡಲು ನಿರಾಕರಿಸುವುದನ್ನು ನಮಗಾಗಿ

ಮಾಡಲು ನಾವು ದೇವರನ್ನು ಕೇಳಿಕೊಳ್ಳಬಹುದೋ?

ಭೂಲೋಕದಲ್ಲೆಲ್ಲಾ ನ್ಯಾಯವು ಆಳಲಿ
ನಾವು ಜೀವಿಸಿರುವಾಗ ದಯೆಯು ಇರಲಿ.
ಬಹಳವಾಗಿ ಕ್ಷಮಿಸಲ್ಪಟ್ಟ ನಾವು
ನಮ್ಮ ಸಹೋದರನನ್ನು ಕ್ಷಮಿಸು ಮರೆಯಲಾರದಂತೆ.

ಅರ್ನೆಸ್ಟ್ ಬಿ. ಅಲ್ಲೆನ್

***"ಕರ್ತನೇ, ನಾನು ಪ್ರಾರ್ಥನೆಯಲ್ಲಿ ನಂಬುವದಿಲ್ಲ.***
***ನಾನು ನಿನ್ನಲ್ಲಿ ನಂಬಿಕೆಯಿಡುತ್ತೇನೆ***
***ನಂಬಿಕೆಯಲ್ಲಿ ಪ್ರಾರ್ಥಿಸುವದನ್ನು ನನಗೆ ಕಲಿಸು."***

ಟಿಪ್ಪಣಿಗಳು

[1]ರಕ್ಷಣೆಯ ಮಾರ್ಗದಲ್ಲಿ ಮಾರ್ಗದರ್ಶನವಾಗಿ ಕೊರ್ನೇಲ್ಯನು ಬೇಡಿಕೊಂಡಾಗ ದೇವರು ಅವನ ಪ್ರಾರ್ಥನೆಯನ್ನು ಕೇಳಿದನು (ಅಪೊಸ್ತಲರ ಕೃತ್ಯಗಳು 10:4). [2]George Scriven, "What a Friend We Have in Jesus." Reproduced by permission of ACU Press, Abilene, Texas.

© 2009 Truth for Today